5. ಅರ್ಜಿಗಳನ್ನು ಒಪ್ಪಿಸುವುದು.

ಅಧ್ಯಕ್ಷರು: ಶ್ರೀ ಕೃಷ್ಣ ಪಾಲೇಮಾರ್ ಅವರು ಅರ್ಜಿಯನ್ನು ಒಪ್ಪಿಸಬೇಕು.

ಮಂಗಳೂರು ತಾಲ್ಲೂಕು ಎಕ್ಕಾರ ಗ್ರಾಮ ಪಂಚಾಯತಿ ವ್ಯಾಪ್ತಿಯ ದುರ್ಗಾ ನಗರದಿಂದ ಮುಚ್ಚೂರು ಪ್ರದೇಶಕ್ಕೆ 4 ಕಿಲೋ ಮೀಟರ್ ಅಂತರದ ರಸ್ತೆ ನಿರ್ಮಾಣದ ಬಗ್ಗೆ ಸದನಕ್ಕೆ ಅರ್ಜಿಯನ್ನು ಒಪ್ಪಿಸುವುದು.

ಅಧ್ಯಕ್ಷರು: ಮಾನ್ಯ ಸದಸ್ಯರು ಗೈರು ಹಾಜರಾಗಿರುವುದರಿಂದ ನಾನೇ ಆ ಅರ್ಜಿಯನ್ನು ಒಪ್ಪಿಸುತ್ತಿದ್ದೇನೆ.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್.): ಮಾನ್ಯ ಅಧ್ಯಕ್ಷರೇ, I present a petition regarding the obstructions to using the public road adjoining Survey No. 25/2, 25/3, 25/4 of Kodechikkanahalli, Bangalore (South).

ಅಧ್ಯಕ್ಷರು: ಒಪ್ಪಿಸಿದೆ. ಅವರಿಗೆ ಕನ್ನಡ ಬರುತ್ತದೆ. ಒಂದೊಂದು ಸಲ ಇಂಗ್ಲೀಷ್ ಮೇಲೆ ಪ್ರೇಮ ಬಂದು ಬಿಡುತ್ತದೆ.

6. ಅಧ್ಯಕ್ಷರ ಅಪ್ಪಣೆ ಮೇರೆಗೆ
ಕಬ್ಬಿನ ಬೆಲೆಯನ್ನು ಟನ್‌ಗೆ 1100 ರೂ. ಗಳಿಗೆ ಏರಿಸಬೇಕೆಂದು ರೈತ ಸಮುದಾಯ ಮಂಡ್ಯದಲ್ಲಿ ಅಮರಣಾಂತ ಉಪವಾಸ ಮಾಡುತ್ತಿರುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೇ, ಮಂಡ್ಯದಲ್ಲಿ ಸುಮಾರು ಒಂದು ವಾರದಿಂದ ಕಬ್ಬಿನ ಬೆಲೆಯನ್ನು 1100 ರೂಪಾಯಿಗಳಿಗೆ ಏರಿಸಬೇಕು ಅಂತ ಹೇಳಿ ರೈತ ಸಮುದಾಯ ಅಮರಣಾಂತ ಉಪವಾಸ ಮಾಡುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಗಮನ ಕೊಟ್ಟಿಲ್ಲ. ಇವತ್ತು ಅಲ್ಲಿ ಬಹಳ ಪ್ರಾಮಾಣಿಕವಾಗಿ ರೈತರು ಕಂಗಾಲಾಗಿದ್ದಾರೆ. ತಮ್ಮನ್ನೂ ಬಂದು ಭೇಟಿ ಮಾಡಿದ್ದಾರೆ. ತಾವು ಸಭೆಯನ್ನು ನಡೆಸಿದ್ದೀರಿ. ತೀವ್ರ ಗಂಭೀರವಾದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಮಂಡ್ಯ ಜಿಲ್ಲೆಯಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ರೈತರು ಸಹ ಕಬ್ಬಿನ ಬೆಳೆಗಾರರಿಗೆ ದರ ಜಾಸ್ತಿಯಾಗಬೇಕು ಅಂತ ಹೇಳಿ ಅವರ ಒತ್ತಾಯ ಇದೆ. ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಈ ಮೂರು ಜಿಲ್ಲೆಗಳ ಜನ ರೈತರು, ಕಬ್ಬಿನ ಬೆಳೆಗಾರರು ನಷ್ಟದಲ್ಲಿದ್ದಾರೆ. ಮತ್ತು ತೊಂದರೆಯಲ್ಲಿದ್ದಾರೆ. ಬಹಳ ಅತ್ಯಂತ ಅಪಾಯದ ಅಂಚಿನಲ್ಲಿ ಕಬ್ಬಿನ ಬೆಳೆಗಾರರು ಇದ್ದಾರೆ. ಸರ್ಕಾರ ಕೂಡಲೇ ಆ ಬೆಳೆಗಾರರನ್ನು ಕರೆಸಿ ಮಾತನಾಡಿ ಕಬ್ಬಿಗೆ ಒಂದು ಟನ್‌ಗೆ 1100 ರೂಪಾಯಿ ಮಂಡ್ಯ ರೈತರು ಏನು ಕೇಳುತ್ತಿದ್ದಾರೆ ಅದನ್ನು ಸಮಗ್ರವಾಗಿ ಮೈಸೂರು, ಚಾಮರಾಜನಗರ, ಮಂಡ್ಯ ಈ ರೈತರೆಲ್ಲರಿಗೂ ನೀಡಬೇಕಾಗುತ್ತದೆ. ಸರ್ಕಾರ ಕೂಡಲೇ ಈ ಬಗ್ಗೆ ಪ್ರಾಮಾಣಿಕವಾದಂತಹ ಕ್ರಮವನ್ನು ಕೈಗೊಳ್ಳಬೇಕು ಅಂತ ಹೇಳಿ ತಮಗೆ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೇ, ಮಂಡ್ಯದ ರೈತರು ಇವರನ್ನು ಒಂದು ಟನ್‌ಗೆ ಏನು 1100 ರೂಪಾಯಿ ಕೇಳಿರಲಿಲ್ಲ. ಅವರು ಇನ್ನೂ ಬಹಳ ಜಾಸ್ತಿ ಕೇಳಿದ್ದರು. ಏಕೆಂದರೆ ರಿಕವರಿ ಜಾಸ್ತಿ ಇದೆ. 600 ರೂಪಾಯಿಗಳು ವ್ಯತ್ಯಾಸ ಇದೆ ಅಂತ ಹೇಳಿ ಅವರು ಇವರಿಗೆ ಪ್ರೂವ್ ಮಾಡಿದ್ದರು. ಸನ್ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಸಭೆ ಕರೆದು